ಒಂದೇ ತೆರನ ಯೂನಿಫಾರ್ಮುಗಳನ್ನು ಕಂಡು ಬೋರಾಗಿದ್ದ ಕಣ್ಣುಗಳಿಗೆ ಹಬ್ಬವನ್ನುಂಟು ಮಾಡುವಂತೆ ದಿನಕ್ಕೊಂದು ಬಣ್ಣದ ಅಂಗಿ ಬೇರೆ. ಹರೆಯದ ಹೆಣ್ಣುಗಳ ಹೃದಯ ಬಡಿತ ಹೆಚ್ಚಿಸಲು ಇನ್ನೇನು ಬೇಕು.

ತನ್ನ ಬಿಳಿ ಬಣ್ಣವನ್ನೇ ಆಸ್ತಿಯೆಂದು ತಿಳಿದಿದ್ದ ರಾಗಿಣಿ ಹೈಸ್ಕೂಲಿನ ದಿನಗಳಲ್ಲೇ ಅವನನ್ನು ಮೆಚ್ಚುತ್ತ ಬಂದವಳು. ಈಗಂತೂ ಕನಸು ಗರಿಗೆದರುವ ಕಾಲ. ಅವನನ್ನು ಮೆಚ್ಚುವುದಷ್ಟೇ ಅಲ್ಲ ಪ್ರೀತಿಸುತ್ತೇನೆಂದೂ ಭಾವಿಸತೊಡಗಿದ್ದಳು. ಅದು ಎಲ್ಲಿಯವರೆಗೆಂದರೆ ಬಿಳಿ ಜಿರಳೆಯೆಂದು ಹೇಳಿ ತನ್ನಿಂದ ಕಚ್ಚಿಸಿಕೊಂಡ ಆ ವಂದನಾ ಕೂಡ ಶಂಕರನ ಹಿಂದೆ ಬಿದ್ದಿದ್ದಾಳೆ ಎಂದು ತಿಳಿದಾಗ ಅವಳನ್ನು ತನ್ನ ಆಜನ್ಮ ವೈರಿಯೆಂದು ಭಾವಿಸುವಷ್ಟು.

ಅವನು ಬೈಸಿಕಲ್ಲಿನಲ್ಲಿ ಬರುತ್ತಿದ್ದ ದಿನಗಳಲ್ಲಿ ಆ ಸೈಕಲ್ಲಿನ ಹಾಂಡಲ್ ಬಾರಿನ ಮೇಲೆ ಕುಳಿತು ಅವನಿಂದ ತಬ್ಬಿ ಹಿಡಿಸಿಕೊಳ್ಳುವ ಕನಸು ಕಾಣುತ್ತಿದ್ದವಳು ಕಾಲೇಜಿಗೆ ಬರಲು ಸುರು ಮಾಡಿದ್ದೇ ಬೈಕಿಗೆ ಬಡ್ತಿ ಹೊಂದಿದ್ದ ಅವನ ಹಿಂದೆ ಕುಳಿತು ತಾನೇ ಅವನನ್ನು ತಬ್ಬಿಹಿಡಿದುಕೊಳ್ಳುವ ಕನಸು ಕಾಣತೊಡಗಿದ್ದಳು. ಆದರೆ ಅಲ್ಲಿಯೂ ವಂದನಾ ಅಡ್ಡ ಬಂದಿದ್ದಳು. ಒಂದು ದಿನ ಆಕೆಯೇ ಅವನ ಹಿಂದೆ ಬೈಕಿನಲ್ಲಿ ಅವನನ್ನು ತಬ್ಬಿಕೊಂಡೇ ಕುಳಿತಿದ್ದಳು. ಕಂಡ ರಾಗಿಣಿಗೆ ಹುಚ್ಚೇ ಹಿಡಿದಿತ್ತು. ಅವ ಬೈಕಿನಿಂದ ಇಳಿಯುತ್ತಿದ್ದುದನ್ನೇ ಕಾಯುತ್ತಿದ್ದು ತಾನಾಗಿಯೇ ಅವನ ಮುಂದೆ ಹೋಗಿ ನಿಂತಿದ್ದಳು. ತನ್ನನ್ನು ಕಂಡೂ ಕಾಣದಂತೆ ತಪ್ಪಿಸಿಕೊಂಡು ಹೋಗಲೆಳಸುತ್ತಿದ್ದ ಅವನ ಗಮನ ಸೆಳೆಯುವಲ್ಲಿ ವಿಫಲಳಾಗುತ್ತಿದ್ದೇನೋ ಎನ್ನುವ ಹೆದರಿಕೆ ಹುಟ್ಟಿ ಅವನ ರಟ್ಟೆಯನ್ನೇ ಹಿಡಿದು ಎಳೆದಿದ್ದಳು. ಅವನು ಕೊಸರಿ ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದರೂ ಬಿಡದೆ ಹಿಡಿದುಕೊಂಡೇ ಇದ್ದರೆ, ಅದೇ ವಂದನಾ ಅವನನ್ನು ಎಳೆದುಕೊಂಡೇ ಹೋಗಿದ್ದಳು. ಆವತ್ತು ಇಡೀ ಮಂಕು ಕವಿದಂತೆ ಕುಳಿತಿದ್ದ ರಾಗಿಣಿಗೆ ಯಾವ ಪಾಠವೂ ತಲೆಗೆ ಹತ್ತಿರಲಿಲ್ಲ. ಪ್ರಶ್ನೆ ಕೇಳಿದ ಲೆಕ್ಚರರಿಗೇ ಗೊಂದಲವಾಗುವಂತೆ ಯಾವುದೋ ಪ್ರಶ್ನೆಗೆ ಯಾವುದೋ ಉತ್ತರ ಕೊಟ್ಟಿದ್ದಳು. 'ಯೂ ಆರ್ ಆಲ್‌ರೈಟ್' ಎಂದು ಲೆಕ್ಚರರ್ ಕೇಳುವುದರೊಳಗೆ ಬೆಲ್ ಆಗಿದ್ದರಿಂದ ಇವಳತ್ತಲೇ ವಿಚಿತ್ರವಾಗಿ ನೋಡುತ್ತ ಅವರು ಹೊರಟು ಹೋಗಿದ್ದರು. ತಡೆದುಕೊಳ್ಳಲಾರದೆ ಕೃಷ್ಣ ಅವಳತ್ತ ಬಂದು ಅನುಕಂಪದಿಂದ 'ಏನಾಯ್ತು...' ಎಂದು ಕೇಳಿದರೆ ಹೆದರಿಸುವವರಂತೆ ದುರುಗುಟ್ಟಿ ನೋಡಿ ಅವನನ್ನು ಮೂಕನನ್ನಾಗಿಸಿ ಅಲ್ಲಿಂದ ಓಡುವಂತೆ ಮಾಡಿದ್ದಳು.

ಅಷ್ಟರಲ್ಲಿ ಅವಳಿಗೆ ಕಾಣಿಸುವಂತೆಯೇ ಕಾರಿಡಾರಿನಲ್ಲಿ ಶಂಕರ ಮತ್ತು ವಂದನ ಒಬ್ಬರಿಗೊಬ್ಬರು ತಾಕಿಕೊಂಡೇ ನಡೆಯುತ್ತ ನಗುತ್ತ ಮಾತಾಡಿಕೊಂಡು ಹೋಗುತ್ತಿದ್ದರು. ಇನ್ನು ತಡೆದುಕೊಳ್ಳಲು ಆಗದ ಆಕೆ ದಿನದ ಶಾಲೆ ಮುಗಿಯಲು ಇನ್ನೂ ಎರಡು ಪೀರಿಯಡ್ ಇದ್ದ ಹಾಗೆಯೇ ಎದ್ದು ಮನೆಗೆ ಹೊರಟಿದ್ದಳು.

ಡಿಗ್ರಿಯ ಕೊನೇ ವರ್ಷ. ಫೈನಲ್ ಪರೀಕ್ಷೆಯ ಕೊನೆಯ ದಿನ. ಉತ್ತಮ ಮಾರ್ಕುಗಳು ಬರುವ ಧೈರ್ಯದಲ್ಲಿ ಒಳ್ಳೆಯ ಮೂಡಿನಲ್ಲಿದ್ದ ಕೃಷ್ಣ ತನ್ನಂತೆಯೇ ಪರೀಕ್ಷೆ ಮುಗಿಸಿ ಮನೆಯ ದಾರಿಯನ್ನು ಹಿಡಿದಿದ್ದ ರಾಗಿಣಿಯನ್ನು ಹಿಂಬಾಲಿಸಿದ್ದ. ಯಾರೂ ಇಲ್ಲದ ಜಾಗದಲ್ಲಿ ಅವಳೊಡನೆ ತನ್ನ ಅಳಲನ್ನು ತೋಡಿಕೊಳ್ಳುವ ಇರಾದೆ ಅವನದ್ದು. ಅಂತಹದೊಂದು ಜಾಗ ಬಂದೊಡನೆಯೇ ಹಿಂದೆ ಮುಂದೆ ಯಾರೂ ಇಲ್ಲ ಎನ್ನುವುದನ್ನು ಖಾತ್ರಿಪಡಿಸಿಕೊಳ್ಳುತ್ತ 'ರಾಗಿಣಿ... ಪರೀಕ್ಷೆ ಹೇಗಾಗಿದೆ.'